211

XXIII. ಈ ಮೀಟಿಂಗಿಗೆ ಬರಲು ಅನಾನುಕೂಲವೆಂತ ಈ ಕೆಳಗೆ ನಮೂದಿಸಿರುವ ಮೆಂಬರುಗಳು ಬರಸಿರುವ ಪತ್ರಗಳನ್ನು ಓದಲಾಯಿತು. 333

ಮೆ" ಎಫ್. ಎ. ಸ್ಟೀಲ್ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರು.
" ಎಸ್. ಡಿ ವೆಂಕಟರಾಮ್ಮಯ್ಯನವರು.
" ಕೊ. ರಾಮಕೃಷ್ಣರು.
" ಬಾಸಪ್ಪನವರು.
" ಗುರುಲಿಂಗೆಗೌಡರು.

ತೀರ್ಮಾನ :—ಕೇಳಿ ವಿಲೆ ಇಡಿಸಲಾಯಿತು.

XXIV. ಬರುವ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗ್ 1907ನೆ ಮೇ ಮಾಹೆ ತಾರೀಖು 13ನೆ ಸೋಮವಾರ ಮಧ್ಯಾಹ್ನ ತ್ಪರ 2 ಘಂಟೆಗೆಂತ ನಿಷ್ಕರ್ಷೆಯಿಂದ ತೀರ್ಮಾನಿಸಲಾಯಿತು.

ಪಿ. ಆರ್. ಡಬ್ಲ್ಯೂ. ಪೆದರಾಲ್, ಪ್ರೆಸಿಡೆಂಟ್.

ಶಿವಮೊಗ್ಗಾ ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮೆ

ಇದರಿಂದ ಸರ್ವಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.—1906ನೆ ಇಸವಿ ನಂಬರು 7ನೆ ರೆಗ್ಯುಲೇಷ್ನ ಅನುಸರಿಸಿ ಈ ಕೆಳಗೆ ತಪಶೀಲು ಕಾಣುವ ಚಕ್ಕ್ತು ಬಂದಿ ಬಳಗೊಂಡಿರುವ ಶಿವಮೊಗ್ಗಾ ಟವನನ್ನು ಬಂದು ಕಾಯಂ ಮುನಿಸಿಪಾಲಿಟಿಯಾಗಿ ಮಾಡಬೇಕೆಂತ ಆಲೋಚಿಸಿ ಇರುತ್ತದೆ. ಇದಕ್ಕೆ ಆಕ್ಷೇಪಣೆ ತೆಗದುಕೊಳ್ಳುವ ತಮಾಂ ಜನಗಳು ಈ ನೋಟಿಸ್ ಮೈಸೂರು ಗೆಜೆಟನಲ್ಲಿ ಪ್ರಾಮುಖ್ಯವಾದ ಎರಡು ತಿಂಗಳು ವಳಗೆ ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಲ್ಲಿಗೆ ತಮ್ಮ ತಮ್ಮ ಆಕ್ಷೇಪಣೆ ಅಂಕ ಕುರಿತು ಅದಕ್ಕೆ ಕಾರಣ ಸಮೇತ ಅಪ್ಲಿಕೇಷ್ನ ಗುಜರಾಯಿಸಿಕೊಳ್ಳತಕ್ಕದ್ದು.—

ಉತ್ತರಕ್ಕೆ.—ಬೆಂಗಳೂರು-ಹೊನ್ನಾವರ ರಸ್ತೆಯಲ್ಲಿ ಇರುವ ಗಡಿಕಲ್ಲು ಲಾಗಾಯಿತು ಲಿಂಗಪ್ಪನ ಪಾಳು ಬಂಗಲೆಯ ಕಾಂಪೌಂಡು ವಳಗೊಂಡು ಮುನಿಸಿಪಲ್ ರಸ್ತೆ ಮಾರ್ಗವಾಗಿ ಪೂರ್ವಕ್ಕೆ ಹೋಗಿ ಡೆಪ್ಯುಟಿ ಕಮಿಷನರವರ ಬಂಗಲೆ ಮತ್ತು ಎಗ್ಜಿಕ್ಯೂಟಿವ್ ಇಂಜನಿಯರ್ ಆಫೀಸನ್ನು ಕೇರಿಸಿಕೊಂಡು ಶಿವಮೊಗ್ಗ ಗ್ರಾಮದ 30ನೆ ಸರ್ವೆ ನಂಬರು ಜಮೀನು ಹತ್ತರ ಹೊನ್ನಾಳ್ಳ ರಸ್ತೆಗೆ ಕೇರಿ ಆ ರಸ್ತೆ ಮಾರ್ಗವಾಗಿ ಸದರಿ ರಸ್ತೆಯ ಸೋಮಯ್ಯನವರ ಕೆರೆ ಏರಿ ಮೇಲಿನ ರಸ್ತೆಯನ್ನು ಸಂಧಿಸುವ ಸ್ಥಳದಲ್ಲಿ ಮುಳ್ಳಕೆರೆ ಗ್ರಾಮದ ಸರ್ವೆ ನಂಬರು 60ನೆ ಜಮೀನು ಬಳಿ ಇರುವ ಆಕ್ಟ್ರಾಯಿ ಉಕ್ಕ್ತ ಡವರಿಗೆ.

ದಕ್ಷಣಕ್ಕೆ.—ಆಗುಂಬೆ ರಸ್ತೆಯಲ್ಲಿ ಇರುವ ಗಡಿಕಲ್ಲು ಲಾಗಾಯಿತು ಹೊಸ ಟವನು ಬಜಾವಣೆ ಜಾಗಾದಲ್ಲಿ ಇರುವ ಆಕ್ಟ್ರಾಯಿ ಕಟ್ಟೆ ಸಮೀಪದಲ್ಲಿ ಇರುವ ತುಂಗಾನದಿ ಸೇತುವೆಯ ದಕ್ಷಿಣ ಪ್ರಾಂತದ ವರಿಗೂ ತುಂಗಾನದಿಯನ್ನು ವಳಗೊಂಡು ಹಳೆ ಫಾರೆಸ್ಟು ಲಾಜ್ಜ್ ಮತ್ತು ಬೆಂಗಳೂರು ಹೊನ್ನಾವರ ರಸ್ತೆಯಲ್ಲಿ ಇರುವ ಗಡಿಕಲ್ಲು ವರಿಗೆ ಇರುವ ಇಸಲಾಪುರ ಗ್ರಾಮದ ಮನೆಗಳನ್ನು ಕೇರಿಸಿಕೊಂಡು ಸದರಿ ಇಸಲಾಪುರ ಗ್ರಾಮದ 16, 15, 14 ಮತ್ತು 13ನೆ ಸರ್ವೆ ನಂಬರು ಜಮೀನುಗಳ ವರಿಗೆ.

ಪೂರ್ವಕ್ಕೆ.—ಇಸಲಾಪುರ ಗ್ರಾಮದ ಸರ್ವೆ ನಂಬರು 13ನೆ ಜಮೀನ್ ಲಾಗಾಯಿತು ಶಿವಮೊಗ್ಗಾದಿಂದ ಹೊಳೆಹೊನ್ನೂರಿಗೆ ಹೋಗುವ ರಸ್ತೆಯಲ್ಲಿ ಇರುವ ಗಡಿಕಲ್ಲಿನಬಳಿ ಸದರಿ ರಸ್ತೆಯನ್ನುದಾಟಿ 26, 25, 24, 21ನೆ ಸರ್ವೆ ನಂಬರು ಜಮೀನುಗಳ ಮಾರ್ಗವಾಗಿ ಹಳೇ ಡಿಸ್ಟ್ರಿಲೇರಿ ಕಟ್ಟಡದ ವರಿಗೆ ಬಂದು ಅಲ್ಲಿಂದ ತುಂಗಾ ನದಿ ಸೇತುವೆಯ ಪಶ್ಚಿಮ ದಿಕ್ಕಿನ ತುದಿ ವರಿಗೆ ಹೋಗಿ ಅಲ್ಲಿಂದ ಆಕ್ಟ್ರಾಯಿ ಕಟ್ಟೆ ಮುಂಭಾಗದಲ್ಲಿ ತಿರುಗಿ ಹೊನ್ನಾಳಿ ರಸ್ತೆ ಮಾರ್ಗವಾಗಿ ಸೋಮಯ್ಯನವರ ಕೆರೆ ಏರಿ ಮೇಲೆ ಹಾದು 1ನೆ ಕ್ಯಾನಿನಲ್ಲಿ ನಮೂದು ಮಾಡಿರುವ ಮುಳ್ಳಕೆರೆ ಗ್ರಾಮದ ಸರ್ವೆ ನಂಬರು 60ನೆ ಜಮೀನುಬಳಿ ಹೊನ್ನಾಳಿ ರಸ್ತೆಯನ್ನು ಕೂಡುವ ಸ್ಥಳದಲ್ಲಿ ಇರುವ ಆಕ್ಟ್ರಾಯಿ ಕಟ್ಟೆವರಿಗೆ.

ಪಶ್ಚಿಮಕ್ಕೆ.—ಬೆಂಗಳೂರು-ಹೊನ್ನಾವರ ರಸ್ತೆಯಲ್ಲಿ ಇರುವ ಗಡಿಕಲ್ಲು ಲಾಗಾಯಿತು ಹೋದಿಗೆರೆ ಮುರಿಗೇಂದ್ರಪ್ಪನ ಬಂಗಲೆಯನ್ನು ಬಳಗೊಂಡು ಸದರಿ ರಸ್ತೆ ಮಾರ್ಗವಾಗಿ ದಕ್ಷಿಣಕ್ಕೆ ಸಿಲೇದಾರ ಲಾಯ ಮತ್ತು ಲೈನ್‌ಗಳು ಮತ್ತು ಮಿಳ್ಳಗಟ್ಟ ಗ್ರಾಮದ 113, 114ನೆ ಸರ್ವೆ ನಂಬರು ಜಮೀನ್‌ಗಳನ್ನು ಬಳಗೊಂಡು ಆಗುಂಬೆ ರಸ್ತೆಯಲ್ಲಿ ಇರುವ ಗಡಿಕಲ್ಲು ಬಳಿ ತುಂಗಾನದಿ ವರಿಗೆ.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಸ್ವಂತ ಪ್ರಕಟನೆ.

ಗುಡಿಬಂಡೆ ಸಬ್ ತಾಲ್ಲೂಕು ಕಸಬಾ ಗುಡಿಬಂಡೆ ಗ್ರಾಮದಲ್ಲಿರುವ ತೆನುಗುಬಣಜಿಗರ ಸುಬ್ಬಣ್ಣನ ಮಗ ಪೆರ್ಷ ಪೊಲೀಸು ದಪೇದಾರ ವೆಂಕಟರಮಣನಾಯಿಡು ಆದ ನಾನು ಇದರಿಂದ ಪ್ರಸಿದ್ಧಪಡಿಸುವದೇನಂದರೆ—ನನಿಗೆ ಬಾಲ್ಯದಲ್ಲೆ ಮಾತಾಪಿತೃಗಳು ಮೃತಪಟ್ಟಿದ್ದರಿಂದ ಸೋದರಮಾವನ ಮನೆಯಲ್ಲಿ ಅವರ ಪೋಷಣೆಯಿಂದ ಪ್ರವರ್ಧಮಾನವಾಗಿ ಸರಕಾರದ ನೌಕರಿಯಿಂದ ಜೀವನ ಮಾಡುತ್ತಾ ಇದ್ದೇನೆ. ನನಿಗೆ ಪಿತ್ರಾರ್ಜಿತ ಸೊತ್ತುಗಳು ಇಲ್ಲ. ನನ್ನ ಮಗ ಆದೆಪ್ಪನು ವಿಭಕ್ತನಾಗಿ ಸರಕಾರದ ನೌಕರಿಯಿಂದ ಜೀವನ ಮಾಡುತ್ತಾ ವೈನರು ತೀರಿದ ಲಾಗಾಯಿತು ಪ್ರತ್ಯೇಕ ವಾಸಮಾಡಿಕೊಂಡು ನಮ್ಮ ಸಂಬಂಧವಿಲ್ಲದೆ ಸ್ವತಂತ್ರನಾಗಿ ತನ್ನ ಇಚ್ಛಾನುಸಾರ ಇರುತ್ತಾನೆ. ಅವನಿಗು ನನಿಗು ಆಸ್ತಿ ಸಂಬಂಧವೇನು ಇರುವದಿಲ್ಲ. ನನ್ನ ಧನ ಋಣಗಳಿಗೆ ನಾನೇ ಬಾಧ್ಯನಾಗಿಯೂ ನನ್ನ ಮಗನ ಧನ ಋಣಗಳಿಗೆ ಅವನೆ ಬಾಧ್ಯನಾಗಿಯೂ ಇರುತ್ತೇವೆ. ನನ್ನ ಸ್ವಾಧೀನ ಅನುಭವದಲ್ಲಿರುವ ಸ್ವಯಾರ್ಜಿತದ ಸ್ಥಿರ ಚರ ಸೊತ್ತುಗಳು ನಾನು ನನ್ನ ಹೆಂಡತಿ ಸಹ ನಮ್ಮ ಜೀವಮಾನದವರಿಗು ಅನುಭವಿಸಿ ನಮ್ಮ ಇಷ್ಟ ಪ್ರಕಾರ ವಿನಿಯೋಗಪಡಿಸತಕ್ಕದ್ದಾಗಿರುತ್ತೆ. ಈ ಆಸ್ತಿಯಲ್ಲಿ ನನ್ನ ಮಗ ಆದೆಪ್ಪನಿಗು ಪಾತ್ರರಾದ ನಂಜುಂಡನಾಯಿಡು ಚಿನ್ನ ನಂಜುಂಡಮ್ಮ ಇವರಿಗೆ ಯಾವಹಕ್ಕು ಇರುವದಿಲ್ಲ. ಸದರಿಯವರ ಋಣಗಳಿಗೆ ನನ್ನ ಅನುಭವದಲ್ಲಿರುವ ಆಸ್ತಿ ಈಡಾಗಿರುವದಿಲ್ಲಾ. ಈ ಅಂಶವು ಸರ್ವರಿಗು ತಿಳಿಯತಕ್ಕದ್ದು.

ವೆಂಕಟರಮಣನಾಯಿಡು ರುಜು.